# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 170 (285) |
| ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀಮತಿ ಹೇಮಲತಾ ನಾಯಕ<br>(ವಿಧಾನಸಭಾ ಕ್ಷೇತ್ರ) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 09.12.2025 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕೊಪ್ಪಳ ಜಿಲ್ಲೆ ಕೊಪ್ಪಳ ತಾಲ್ಲೂಕಿನಲ್ಲಿ ಬಲ್ಡೋಟ ಸಮೂಹದ ಬಿ.ಎಸ್.ಪಿ.ಎಲ್ ಕಾರ್ಖಾನೆಯ ನಿರ್ಮಾಣ ಕಾಮಗಾರಿಯನ್ನು ಸ್ಥಗಿತಗೊಳಿಸಲು ಮಾನ್ಯ ಮುಖ್ಯಮಂತ್ರಿವರು ಆದೇಶಿಸಿದಾಗ್ಯೂ ಕಂಪನಿಯವರು ಕಾಮಗಾರಿಯನ್ನು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವರ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ; | ಮೆ:ಬಲ್ಡೋಟ ಸಮೂಹದ ಬಿ.ಎಸ್.ಪಿ.ಎಲ್ ಕಂಪನಿಯವರು ಈ ಹಿಂದೆ ಕಾಂಪೌಂಡ್ ಅನ್ನು ನಿರ್ಮಿಸಿರುತ್ತಾರೆ ಹಾಗೂ ಸಮತಟ್ಟು ಮಾಡುವ ಕಾಮಗಾರಿಯನ್ನು ಕೈಗೊಂಡಿರುತ್ತಾರೆ.<br>ದಿನಾಂಕ: 28.11.2025ರಂದು ಉದ್ದೇಶಿತ ಜಾಗವನ್ನು ಪರಿವೀಕ್ಷಿಸಿದಾಗ ಯಾವುದೇ ಕಾಮಗಾರಿಯು ಚಾಲನೆಯಲ್ಲಿರುವುದಿಲ್ಲ ಎಂದು ಪರಿಸರ ಅಧಿಕಾರಿಗಳು, ಕೊಪ್ಪಳರವರು ತಿಳಿಸಿರುತ್ತಾರೆ. |
| ಆ | ಬಿ.ಎಸ್.ಪಿ.ಎಲ್ ಕಾರ್ಖಾನೆಯನ್ನು ಸ್ಥಾಪಿಸುವ ಕುರಿತಂತೆ ಸರ್ಕಾರದ ಸ್ಪಷ್ಟವಾದ ನಿಲುವೇನು; (ವಿವರ ಒದಗಿಸುವುದು) | ಬಲ್ಡೋಟಾ ಗ್ರೂಪ್‌ನ ಸಂಸ್ಥೆಯಾದ ಎಂಎಸ್‌ಪಿಎಲ್ ಕೈಗಾರಿಕೆ ಒಳಗೊಂಡಂತೆ ಇತರೆ ಕೈಗಾರಿಕೆಗಳಿಂದ ಮಾಲಿನ್ಯವಾಗುತ್ತಿರುವ ಬಗ್ಗೆ ಅಧ್ಯಯನ ನಡೆಸಲು ದಿನಾಂಕ 11.12.2024 ಮತ್ತು 13.12.2024 ರಂದು ಕೊಪ್ಪಳ ತಾಲ್ಲೂಕಿನಲ್ಲಿರುವ ವಿವಿಧ ಕೈಗಾರಿಕೆಗಳನ್ನು ತಜ್ಞರ ಸಮಿತಿಯು ಪರಿವೀಕ್ಷಣೆ ಮಾಡಿದ್ದು, ಈ ಸಮಿತಿಯು ವರದಿ ನೀಡಿರುತ್ತದೆ.<br><br>Secretary, MoEF & CC, GoI ಇವರು ತಮ್ಮ ಪತ್ರ ದಿನಾಂಕ 08.07.2025 ರಲ್ಲಿ ತಜ್ಞರ ಸಮಿತಿ ನೀಡಿರುವ ವರದಿಯನ್ವಯ ಮುಂದಿನ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರವನ್ನು ಕೋರಿರುತ್ತಾರೆ.<br><br>ಅದರಂತೆ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪತ್ರ ದಿನಾಂಕ 05.08.2025 ರಲ್ಲಿ ತಜ್ಞರ ಸಮಿತಿಯ ವರದಿಯನ್ನು ಸದಸ್ಯ ಕಾರ್ಯದರ್ಶಿ - KSPCB, ಜಿಲ್ಲಾಧಿಕಾರಿಗಳು - ಕೊಪ್ಪಳ, ಆಯುಕ್ತರು - ಕೈಗಾರಿಕಾಭಿವೃದ್ಧಿ, ಕಾರ್ಯದರ್ಶಿ - ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಹಾಗೂ ಸಿಇಒ & ಇಎಂ - ಕೆಐಎಡಿಬಿ ಇವರುಗಳಿಗೆ ಕಳುಹಿಸಿದ್ದು, ಸದರಿ ವರದಿಯ ಶಿಫಾರಸ್ಸುಗಳನ್ನು ಪರಿಶೀಲಿಸಿ, ಅನುಷ್ಠಾನಗೊಳಿಸುವಂತೆ ಕೋರಲಾಗಿದೆ. |

| | | |
|---|---|---|
| ಇ | ಬಿ.ಎಸ್.ಪಿ.ಎಲ್ ಕಾರ್ಖಾನೆಯನ್ನು ಸ್ಥಾಪಿಸಲು ಜಿಲ್ಲೆಯ ಸಾರ್ವಜನಿಕರ ವಿರೋಧವಿದ್ದರೂ ಸಹ ಸರ್ಕಾರ ಏಕೆ ಸ್ಥಾಪನೆ ಮಾಡಲು ಅನುವು ಮಾಡಿಕೊಡುತ್ತದೆ; ಇದು ಸಾರ್ವಜನಿಕರ ವಿರೋಧಿ ಆಡಳಿತವಲ್ಲವೇ | ಜಿಲ್ಲೆಯಲ್ಲಿನ ಕೆಲವು ಸಂಘಟನೆಗಳು ಕಂಪನಿಯ ಪರವಾಗಿ ಹಾಗೂ ಕೆಲವು ವಿರುದ್ಧವಾಗಿ ಮನವಿ ಸಲ್ಲಿಸಿರುತ್ತಾರೆ. |
| ಈ | ಜಿಲ್ಲೆಯ ಸಾರ್ವಜನಿಕರ ವಿರೋಧ ಇರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದಿಂದ ಕಾರ್ಖಾನೆ ಸ್ಥಾಪಿಸಕೂಡದು ಎಂದು ಕೇಂದ್ರ ಸರ್ಕಾರದ ಪರಿಸರ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ; ಸಲ್ಲಿಸಿದ್ದಲ್ಲಿ, ಅದರ ಪ್ರತಿಯನ್ನು ಒದಗಿಸುವುದು | ಈ ಕುರಿತು ಕೇಂದ್ರದ ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಿಲ್ಲ. |
| ಉ | ಸಲ್ಲಿಸದಿದ್ದಲ್ಲಿ ಏಕೆ ಸಲ್ಲಿಸಲಾಗಿಲ್ಲ; ಪರೋಕ್ಷವಾರಿ ಸರ್ಕಾರವು ಈ ಕಂಪನಿ ಸ್ಥಾಪನೆಗೆ ಬೆಂಬಲವಿದೆಯೇ? (ವಿವರ ನೀಡುವುದು) | |

ಸಿಐ 350 ಎಸ್‌ಪಿಐ 2025

**(ಎಂ.ಬಿ.ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು